# ಆತನ ಪಾಡುವೆ ಅನವರತ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 42.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 410.
3. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 126.
4. **Note:** Lyrics given here are as per Ref. 1. The wordings in Ref. 2 and Ref. 3 are matching with these lyrics.
5. **Note:** Singer has followed these lyrics.

ರಾಗ: ಪೂರ್ವಿ ತಾಳ: ಅಟ

ಆತನ ಪಾಡುವೆ ಅನವರತ
ಪ್ರೀತಿಯಿಂದಲಿ ತನ್ನ ಭಕುತರ ಸಲಹುವ || ಪ ||

ಆವಾತನ ಕೀರ್ತಿ ಪರೀಕ್ಷಿತ ಕೇಳಿ
ಪಾವನನಾದನು ಮೂಜಗವರಿಯೆ
ಭಾವ ಶುದ್ಧಿಯಲಿ ಶುಕನಾರ ಪೊಗಳುವ
ಆವಾಗ ಪ್ರಹ್ಲಾದನಾರ ನೆನೆವನಯ್ಯ || ೧ ||

ಶಿಲೆಯ ಬಾಲೆಯ ಮಾಡಿದ ಪಾದವಾರದು
ನಳಿನ ಸಂಭವನ ಪೆತ್ತವನಾರು
ಕಲಿಯುಗದಿ ಜನರಿಗೆ ಆರ ನಾಮವೆ ಗತಿ
ಇಳೆಯ ಭಾರವನಿಳುಹಿ ಸಲಹಿದವರಾರಯ್ಯ || ೨ ||

ದ್ರುಪದನ ಸುತೆಯಭಿಮಾನ ರಕ್ಷಕನಾರು
ನೃಪ ಧರ್ಮಜಗೆ ರಕ್ಷಕನಾರು
ಕೃಪೆಯಿಂದ ವಿದುರನ ಮನೆಯಲುಂಡವನಾರು
ಆಪತ್ಕಾಲದಿ ಗಜನ ಸಲಹಿದವರಾರಯ್ಯ || ೩ ||

ಅತಿಶಯದಿಂದ ಅರ್ಜುನಗೆ ಸಾರಥಿಯಾಗಿ
ರಥವನೇರಿ ನಡೆಯಿಸಿದವನಾರು
ಪೃಥಿವಿಯೆಲ್ಲವ ಬಲಿ ಯಾರಿಗೊಪ್ಪಿಸಿದನು
ಮತಿವಂತ ಧ್ರುವನ ರಕ್ಷಕನಾರು ಪೇಳಯ್ಯ || ೪ ||

ಸಾಗರನ ಮಗಳಿಗು ಆರ ನಾಮವೆ ಗತಿ
ಯೋಗದಿ ನಾರದನಾರ ಭಜಿಪನಯ್ಯ
ರಾಗ ರಹಿತ ಹನುಮಂತನೊಡೆಯನಾರು
ಭಾಗವತರ ಪ್ರಿಯ ಪುರಂದರ ವಿಠ್ಠಲ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಭಾರತ–ರಾಮಾಯಣ–ಭಾಗವತಗಳಲ್ಲಿ ಬರುವ ಪ್ರಸಂಗಗಳನ್ನು ಪೋಣಿಸಿ ಹರಿಯ ಮಾಹಾತ್ಮ್ಯೆಯನ್ನು ಹಾಡಿದ್ದಾರೆ. ಅರ್ಜುನನ ಮೊಮ್ಮಗನಾದ ಪರೀಕ್ಷಿದ್ರಾಜನಿಗೆ ಶುಕ ಮುನಿಗಳು ಏಳು ದಿನಗಳ ಕಾಲ ಭಾಗವತ ಪುರಾಣದ ಶ್ರವಣ ಮಾಡಿಸಿದುದನ್ನೇ ಮೊದಲಲ್ಲಿ ಎತ್ತಿಕೊಂಡು ಪ್ರಹ್ಲಾದ, ಅಹಲ್ಯೆ, ಬ್ರಹ್ಮ, ದ್ರೌಪದಿ, ಯುಧಿಷ್ಠಿರ, ವಿದುರ, ಇಂದ್ರದ್ಯುಮ್ನ (ಗಜೇಂದ್ರ), ಅರ್ಜುನ, ಬಲಿ, ಧ್ರುವ, ಲಕ್ಷ್ಮಿ, ನಾರದ, ಹನುಮಂತ ಇವರೆಲ್ಲ ಪರಮ ಭಾಗವತರೆಂದು ನಿರ್ದೇಶಿಸಿದ್ದಾರೆ.

**ಅನವರತ** = ನಿರಂತರ, ಸದಾ, ಯಾವಾಗಲೂ

**ಶಿಲೆಯ ಬಾಲೆಯ ಮಾಡಿದ ಪಾದ** = ರಾಮ ದೇವರ ಪಾದ ಬಡಿದು ಕಲ್ಲು ಅಹಲ್ಯೆಯಾದದ್ದು

**ನಳಿನಸಂಭವ** = ಬ್ರಹ್ಮ

**ದ್ರುಪದನ ಸುತೆ** = ದ್ರೌಪದಿ

**ಧರ್ಮಜ** = ಧರ್ಮರಾಯ

**ಸಾಗರನ ಮಗಳು** = ರಮಾದೇವಿ, ಲಕ್ಷ್ಮಿ

**Classification:** Keerthane
**Ankita:** purandara vittala
**Location:** NA
**Category:** mahatmya jnana, bhakti

**Sub-Category:** priti, kirti, bhakti, parikshita, bhagavata, ahalya, brahma, kaliyuga, jana, bhumi, draupadi, pandava, vidura, mane, gaja, bali, Dhruva, Lakshmi, narada, bhajane, Hanumantha, Priya,

**Pravachana:** NA

**Explanation:** NA